ಮನೆಗಳಿಷ್ಟು ? ಮನೆಗಳು ವಿತರಣೆಯಾಗದಿರಲು ಕಾರಣವೇನು ? ಗ್ರೂಪ್‌ವಾರು ತಿಳಿಸುವುದು. ಅಲ್ಲದೆ ಯಾವ್ಯಾವ ಬಡಾವಣೆಗಳಲ್ಲಿ ಕಟ್ಟಿಸಿದ ಒಟ್ಟು ಪ್ಲಾಟ್‌ಗಳಿಷ್ಟು ? ಯಾವ ಯಾವ ಪೊತ್ತದ ಪ್ಲಾಟ್‌ಗಳನ್ನು ಕಟ್ಟಿಸಿರುತ್ತಿರಿ ? ಅವುಗಳಲ್ಲಿ ಎಷ್ಟು ಖಾಲಿ ಇವೆ ? ಹಾಗೆ ಖಾಲಿ ಇರುವ ಮನೆಗಳನ್ನು ಮತ್ತು ಪ್ಲಾಟುಗಳನ್ನು ಇತರರಿಗೆ ವಿತರಣೆ ಮಾಡುವಿರಾ ಎಂದು ತಿಳಿಸಬೇಕಾಗಿ ವಿನಂತಿಸುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ, ಸ್ವಂತ ಹಣವನ್ನು ಕೊಡುವ ಯೋಜನೆ ಕೆಳಕಡೆ ಸುವಾರು ೪೩೨ ಮನೆಗಳನ್ನು ಈಗಾಗಲೇ ಬೇರೆ ಬೇರೆ ಕಾರಣಗಳಿಗೋಸ್ಕರ ಬಿಟ್ಟಿರತಕ್ಕದ್ದು ಇದೆ. ರಾಜಮಹಲ್ ಸೆಕೆಂಡ್ ಸ್ಟೇಜ್‌ನಲ್ಲಿ ಹೈಯರ್ ಗ್ರೂಪಿನಲ್ಲಿ ೫೫೮ ಮನೆಗಳನ್ನು ಕಟ್ಟಿದ್ದೇವೆ. ಅದೇರೀತಿ ಬಿ.ಟಿ.ಎಂ. ಬಡಾವಣೆಯಲ್ಲಿ ಬೇರೆ ಬೇರೆ ವರ್ಗಗಳವರಿಗೆ ಕಟ್ಟಿರತಕ್ಕ ಮನೆಗಳು ೫೦೮ ಮನೆಗಳಿವೆ. ಎಂ.ಐ.ಜಿ.ಯಲ್ಲಿ ೨೬೪ ಮನೆಗಳು, ಎಂ ಐ.ಜಿ. ಲೋ ಇನ್‌ಕಂ ಗ್ರೂಪ್‌ನಲ್ಲಿ ೨೪ ಮನೆಗಳನ್ನು ಕಟ್ಟಿದ್ದೇವೆ. ಎಲ್.ಐ.ಜಿ.ನಲ್ಲಿ ೨೧೬ ಮನೆಗಳನ್ನು ಎಲ್.ಐ.ಜಿ. ಲೋ ಇನ್‌ಕಂ ಗ್ರೂಪ್‌ನಲ್ಲಿ ೪೪ ಮನೆಗಳನ್ನು ಕಟ್ಟಿದ್ದೇವೆ. ನಂದಿನಿ ಲೇಔಟ್‌ನಲ್ಲಿ ಎಂ.ಐ ಜಿ.ನಲ್ಲಿ ೬೦೦ ಮನೆಗಳನ್ನು, ಎಂ.ಐ.ಜಿ. ಲೋ ಇನ್‌ಕಂ ಗ್ರೂಪಿನಲ್ಲಿ ೫೨ ಮನೆಗಳನ್ನು ಎಲ್.ಐ.ಜಿ.ನಲ್ಲಿ ೭೨೦ ಮನೆಗಳನ್ನು ಎಲ್.ಐ.ಜಿ. ಲೋ ಇನ್‌ಕಂ ಹೌಸಸ್ ೪೦ ಒಟ್ಟು ೧೯೧೮ ಮನೆಗಳನ್ನು ಕಟ್ಟಲಾಗಿದೆ. ೧೯೮೨–೮೩ನೇ ಸಾಲ್ಗಿನಲ್ಲಿ ಯಾರು ಮುಂಗಡ ಹಣವನ್ನು ಸಂಪೂರ್ಣವಾಗಿ ಕಟ್ಟಿರುತ್ತಾರೆ, ಅವರಿಗೆ ಪ್ಲಾಟ್‌ಗಳನ್ನು ಕೊಡತಕ್ಕ ಯೋಜನೆಯನ್ನು ಕಾರ್ಯಕ್ರಮದಲ್ಲಿ ಮಾಡಿದ್ದೇವೆ. ಈಗ ಶೇಕಡ ೨೫ ರಷ್ಟು ಹಣವನ್ನು ಪ್ರಥಮವಾಗಿ ತಕ್ಷಣ ಕೊಡಬೇಕು ಉಳಿದ ಹಣವನ್ನು ಮೂರು ಕಂತುಗಳಲ್ಲಿ ಕೊಡಬೇಕೆಂದು ನಿಯಮ ಇರುವುದರಿಂದ ಬಿಡುಗಡೆಯಾಗಿರತಕ್ಕ ಮನೆಗಳನ್ನು ಪ್ರಾಧಿಕಾರದವರಿಗೆ ವಾಪಸ್ಸು ಕೊಟ್ಟಿರತಕ್ಕ ಉದಾಹರಣೆಗಳಿವೆ. ರಾಜಮಹಲ್ ಸೆಕೆಂಡ್ ಸ್ಟೇಜ್‌ನಲ್ಲಿ ಹೈಯರ್ ಇನ್‌ಕಂ ಗ್ರೂಪಿನಲ್ಲಿ ೫ ನಂದಿನಿ ಲೇಔಟ್‌ನಲ್ಲಿ ಎಂ.ಐ.ಜಿ. ಪ್ಲಾಟ್‌ಗಳು ೧೫೯, ಎಲ್.ಐ.ಜಿ. ಲೋ ಹೌಸಸ್ ೧೬, ಎಲ್.ಐ.ಜಿ. ಪ್ಲಾಟ್‌ಗಳು ೧೨೫, ಬಿ.ಟಿ.ಎಂ. ಲೇಔಟ್‌ನಲ್ಲಿ ಎಂ.ಐ.ಜಿ.ಯಲ್ಲಿ ೯, ಎಲ್.ಐ.ಜಿ.ನಲ್ಲಿ ೧೪೩ ಈ ರೀತಿ ಒಟ್ಟು ೪೩೨ ಮನೆಗಳನ್ನು ಪ್ರಾಧಿಕಾರದವರಿಗೆ ವಾಪಸ್ಸು ಬಿಟ್ಟಿದ್ದಾರೆ. ನಾವು ಇತ್ತೀಚೆಗೆ ಈ ಮನೆಗಳ ಬಗ್ಗೆ ಯಾರ್ಯಾರಿಗೆ ಆಸಕ್ತಿಯಿದೆ ಅಂತಹವರು ಅರ್ಜಿ ಹಾಕಿಕೊಳ್ಳಬಹುದೆಂದು ಅರ್ಜಿಗಳನ್ನು ಕರೆದಿದ್ದೇವೆ. ೪೩೨ ಮನೆಗಳಲ್ಲಿ ೧೨೫ ಮನೆಗಳನ್ನು ವಿಶೇಷವಾಗಿ ಪತ್ರಿಕಾಕರ್ತರಿಗೆ ಕೊಡತಕ್ಕದ್ದು ಬಿಟ್ಟು ೩೦೭ ಇರುತ್ತವೆ. ಅರ್ಜಿಗಳು ಅದಕ್ಕಿಂಥ ಕಡಿಮೆ ಬಂದಿವೆ. ಆ ಮನೆಗಳಿಗೆ ಹಣವನ್ನು ಕಟ್ಟಲಿಕ್ಕೆ ಚೈತನ್ಯವಿಲ್ಲದಿರುವವರು ಅರ್ಜಿಗಳನ್ನು ಹಾಕಿದ್ದಾರೆ. ಸ್ವಲ್ಪ ದಿವಸಗಳಲ್ಲಿ ಯಾರ್ಯಾರು ಅರ್ಜಿ ಹಾಕಿದ್ದಾರೆ ಅವರಿಗೆ ಮನೆಗಳನ್ನು ಕೊಡತಕ್ಕ ವ್ಯವಸ್ಥೆ ಮಾಡುತ್ತೇವೆ. ಇ.ಡಬ್ಲ್ಯೂ.ಎಸ್.ನವರಿಗೆ ಲಾಟರಿ ಸಿಸ್ಟಮ್‌ನಲ್ಲಿ ಮನೆಗಳನ್ನು ಕೊಡತಕ್ಕ ಯೋಚನೆ ಮಾಡುತ್ತಿದ್ದೇವೆ.

ಅಧ್ಯಕ್ಷರು.— ಮಾನ್ಯ ವೀರಯ್ಯಸ್ವಾಮಿಯವರು. ಸದಸ್ಯರು ಇಲ್ಲ.

(೭) ಪುತ್ತೂರಿಂ ಬಸ್ ನಿಲ್ದಾಣದ ಅವ್ಯವಸ್ಥೆ ಸರಿಪಡಿಸುವ ಬಗ್ಗೆ

ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣವು ಕಳೆದ ೨೨ ವರುಷಗಳ ಹಿಂದೆ ಉದ್ಘಾಟನೆ ಮಾಡಿದ್ದರೂ, ಅವಶ್ಯಕ ಕೆಲಸ ಕಾರ್ಯಗಳು ನಡೆದಿಲ್ಲ. ಪುತ್ತೂರು ಬಸ್ ನಿಲ್ದಾಣಕ್ಕೆ ಕಾಂಕ್ರೀಟು ಹಾಕುವಂತಹ ಕೆಲಸವಾಗದೇ ಬೇಸಿಗೆ ಕಾಲದಲ್ಲಿ ಧೂಳು ತುಂಬುವುದು ಹಾಗೂ ಮಳೆಗಾಲಕ್ಕೆ ನೀರು ತುಂಬಿ ಕೆಸರಿನಿಂದ ತುಂಬುವುದರಿಂದ ಹೆಚ್ಚಿನ ತೊಂದರೆ ಪ್ರಯಾಣಿಕರಿಗೆ ಆಗುತ್ತಿದೆ. ಕಳೆದ ವರ್ಷ ಮಾನ್ಯ ಮಂತ್ರಿಗಳಾದ ವೀರಣ್ಣನವರು ಕಳೆದ ವರ್ಷದ ಮಳೆಗಾಲ ಶುರುವಾಗುವುದರ ಮೊದಲು ಪೂರ್ತಿ ಮಾಡುವುದಾಗಿ ಸದನದಲ್ಲಿ ಭರವಸೆ ಕೊಟ್ಟಿದ್ದರು. ಮಂತ್ರಿಗಳ ಭರವಸೆಗೆ ಸಾರ್ವಜನಿಕರಲ್ಲಿ ಬೆಲೆ ಇಲ್ಲದ ರೀತಿಯಲ್ಲಿ ಅಭಿಪ್ರಾಯವಾಗಿದೆ. ಪುತ್ತೂರು ಬಸ್ ನಿಲ್ದಾಣದಲ್ಲಿ ಕೆಲವೊಂದು ಅವಶ್ಯಕತೆಗಳು ಇಲ್ಲದೆ ಕೆಲವೊಂದು ಅಪಘಾತಗಳು ನಡೆದರೂ ಯಾವುದೇ ರೀತಿಯ ಬದಲಾವಣೆ ಯಾಗಿರುವುದು ಕಂಡು ಬರುವುದಿಲ್ಲ. ನಿಲ್ದಾಣದಲ್ಲಿ ಕೆಲವೊಂದು ಅಜಾಗರೂಕತೆಯಿಂದ ಇತ್ತೀಚೆಗೆ ಎರಡು ಮರಣವಾಗಿದೆ ಹಾಗೂ ಇನ್ನೊಬ್ಬರಿಗೆ ತೀವ್ರ ಗಾಯವಾಗಿದೆ. ಆದುದರಿಂದ ಮಾನ್ಯ

ಮಂತ್ರಿಗಳು ಕೂಡಲೇ ಪುತ್ತೂರು ಬಸ್ ನಿಲ್ದಾಣದ ಅವ್ಯವಸ್ಥೆಯನ್ನು ಸರಿಪಡಿಸಬೇಕಾಗಿ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಹಾಗೆ ಪುತ್ತೂರು ಬಸ್ ನಿಲ್ದಾಣದಲ್ಲಿ ಆ ರೀತಿಯ ಅವ್ಯವಸ್ಥೆಯಿಲ್ಲ. ಅದು ಜೊಸ ಬಸ್ ನಿಲ್ದಾಣವಾದುದರಿಂದ ಕಾಂಕ್ರೀಟ್ ಹಾಕುವುದಕ್ಕೆ ಆಗಿಲ್ಲ. ಶಿಲ್ಟಿಂಗ್ ಹಾಕಿದ ಮೇಲೆ ಒಂದೆರಡು ವರ್ಷ ಬಿಡಬೇಕು, ಆದ್ದರಿಂದ ಟಾರ್ ಹಾಕುವುದಕ್ಕೆ ಆಗಿಲ್ಲ. ಈ ವರ್ಷ ಸಾರಿಗೆ ಸಂಸ್ಥೆಯ ಬಡ್ಜೆಟ್ ನಲ್ಲಿ ೫ ಲಕ್ಷ ರೂಪಾಯಿಗಳನ್ನು ಅದಕ್ಕೋಸ್ಕರ ಇಟ್ಟಿದ್ದೇವೆ ಕಳೆದವಾರ ಸದನದಲ್ಲಿ ಇದೇ ಪ್ರಶ್ನೆಯನ್ನು ಮಾನ್ಯ ಸದಸ್ಯರು ಎತ್ತಿದ್ದರು, ಆಗ ಈ ಕೆಲಸಕ್ಕೆ ೫ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ ಕೆಲಸ ಮಾಡಿಸುತ್ತೇವೆಂದು ಹೇಳಿದ್ದೇನೆ ಬಾಕಿ ವಿಷಯಗಳನ್ನು ಎತ್ತಿದ್ದಾರೆ, ಅದಕ್ಕೂ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣಕ್ಕೂ ಯಾವುದೇ ರೀತಿಯ ಸಂಬಂಧವಿರುವುದಿಲ್ಲ.

ವಿತ್ತೀಯ ಕಾರ್ಯಕಲಾಪಗಳು

೧೯೮೮–೮೯ನೇ ಸಾಲಿನಲ್ಲಿ ಬೇಡಿಕೆಗಳ ಮೇಲಿನ ಚರ್ಚೆ (ಮುಂದುವರಿದುದು)

ಬೇಡಿಕೆಗಳ ಕ್ರ.ಸಂ. ೩೨,೩೩,೩೪,೩೫,೪೫ ಮತ್ತು ೪೭ (ಲೋಕೋಪಯೋಗಿ, ನಗರಾಭಿವೃದ್ಧಿ, ಮತ್ತು ವಸತಿ ಇಲಾಖೆಗಳು)

ಅಧ್ಯಕ್ಷರು.—ಈಗಾಗಲೇ ಈ ಬೇಡಿಕೆಗಳ ಮೇಲೆ ೨೦ ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ ಇನ್ನೂ ೨೧ ಜನ ಮಾತನಾಡಬೇಕಾಗಿದೆ, ಒಬ್ಬೊಬ್ಬರಿಗೆ ಹತ್ತು ನಿಮಿಷ ಎಂದು ಇಟ್ಟುಕೊಂಡರೂ ಏಳು ಗಂಟೆಯಾಗುತ್ತದೆ. ಇವತ್ತು ಚರ್ಚೆ ಮುಗಿಯಬೇಕು ನಾಳೆ ಮಂತ್ರಿಗಳು ಉತ್ತರ ಕೊಡುತ್ತಾರೆ. ಈಗ ಶ್ರೀ ಎಸ್. ಪುಟ್ಟಸ್ವಾಮಿಯವರು ಗೈರು ಹಾಜರಿದ್ದಾರೆ. ಆದ್ದರಿಂದ ಶ್ರೀ ವಿನಯಕುಮಾರ್ ಸೊರಕೆಯವರು ಮಾತನಾಡಬಹುದು ;

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಸದಸ್ಯರು ಮಾತನಾಡಲಿ, ಅವರಿಗೆ ಅವಕಾಶ ಕೊಡಿ, ಆದರೆ ತಾವು ಪ್ರೊಸೀಜರ್ ಬಿಡುತ್ತಿದ್ದೀರಿ.

ಅಧ್ಯಕ್ಷರು.—ಅವರು ಮಾತನಾಡಿದ ಮೇಲೆ ನೀವೆ ಮಾತನಾಡಿ. ಮೂರು ಪಾರ್ಟಿಯವರು ಇದ್ದೀರಿ, ಈಗ ಕಾಂಗ್ರೆಸ್‌ನವರನ್ನು ಕರೆದಿದ್ದೇನೆ. ತಮ್ಮ ಪಾರ್ಟಿಯಲ್ಲಿ ತಮ್ಮ ಹೆಸರು ಮೊದಲೇ ಇದೆ, ಅವೇಲೆ ಜನತಾದವರು. ಮೊದಲು ವಿರೋಧಪಕ್ಷದವರು ಅಮೇಲೆ ಜನತಾದವರು, ಈಗ ವಿನಯಕುಮಾರ್ ಸೊರೆಕೆಯವರು ಮಾತನಾಡಬಹುದು.

ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಹಾಗೂ ನಗರಾಭಿವೃದ್ಧಿ ಸಚಿವರು ಮತ್ತು ವಸತಿ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ ಮುಖ್ಯಮಂತ್ರಿಗಳ್ಳ ತಾಳಿದ ಅಭಿಪ್ರಾಯದ ರೀತಿಯಲ್ಲಿ ಪ್ರತಿಯೊಂದು ಹಂತದಲ್ಲಿಯೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲಸ ಕಾರ್ಯ ಮಾಡುವ ಮಟ್ಟಿಗೆ ಶಹಭಾಷ್‌ಗಿರಿ ಪಡೆಯುತಕ್ಕೆ ಜನರು ನಾವಿದ್ದೇವೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಕೂಡ ದಕ್ಷಿಣ ಕನ್ನಡ ಜಿಲ್ಲೆಗೆ ಭೇಟಿ ಕೊಟ್ಟಂಥ ಸಂದರ್ಭದಲ್ಲಿ ಜಿಲ್ಲಾಪರಿಷತ್ತಿನಲ್ಲಿ ಕುಳಿತು ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತು ಒಳ್ಳೆಯ ಕೆಲಸವನ್ನು ಮಾಡಿದೆ. ರಾಜ್ಯದಲ್ಲೇ ಇದು ಪ್ರಥಮ ಸ್ಥಾನದಲ್ಲಿದೆ ಎಂದು ಶಹಭಾಸ್‌ಗಿರಿಯನ್ನು ಕೊಟ್ಟಿದ್ದಾರೆ. ಇದೇರೀತಿಯಲ್ಲಿ ಇತರ ಮಂತ್ರಿಗಳು ಕೂಡ ದಿವಸಕ್ಕೆ ಒಬ್ಬರೋ ಇಬ್ಬರೋ ಅಂತ ತಿಂಗಳಿಗೆ ೩೦ ಮಂದಿ ಮಂತ್ರಿಗಳೂ ಕೂಡ ದಕ್ಷಿಣ ಕನ್ನಡ ಜಿಲ್ಲೆಗೆ ಬಂದು ಅಲ್ಲಿ ವಾಸ ಇದ್ದು ಹೋಗುವ ಸಂಪ್ರದಾಯ ಇದೆ. ಅಲ್ಲಿ ಸುಂದರವಾದ ಸಮುದ್ರ ತೀರ ಇದೆ. ಆದರೆ ನಮ್ಮಲ್ಲಿ ಅಭಿವೃದ್ಧಿ ಕಾರ್ಯಗಳ ವಿಷಯದಲ್ಲಿ ಮಾತ್ರ ಏಕೆ ಹೆಚ್ಚಿನ ತಾರತಮ್ಯ ನಡೆಯುತ್ತಿದೆಯೋ ನನಗೆ ಗೊತ್ತಿಲ್ಲ. ಮಂತ್ರಿಗಳು ದಕ್ಷಿಣ ಕನ್ನಡ ಜಿಲ್ಲೆಗೆ ಬರುವಷ್ಟು ಉದ್ದೇಶ ಹೆಚ್ಚಿನಂಶ ಸಮುದ್ರ ತೀರದಲ್ಲಿ ಪ್ರವಾಸಿಗೃಹದಲ್ಲಿ ತಂಗಲಿಕ್ಕೋ ಅಥವಾ ಯಾವ ಕಾರಣ ಕ್ಕೋಸ್ಕರ ಬರುತ್ತಿದ್ದಾರೋ ಗೊತ್ತಿಲ್ಲ. ಆದರೆ ಅಲ್ಲಿಯ ಯಾವುದೇ ಅಭಿವೃದ್ಧಿಕೆಲಸ ಕಾರ್ಯಗಳಲ್ಲಿ